ಹೊದಿಕೆಯಿದೆ. ಈ ವ್ಯತ್ಯಾಸವನ್ನು ಬಿಟ್ಟರೆ ಮಕ್ಬರಾ ತಾಜ್ ಮಹಲ್ ಅನ್ನು ಒಳ ಹೊರಗೆ ಎಲ್ಲಾ ರೀತಿಯಲ್ಲೂ ಹೋಲುತ್ತದೆ. ಸಮಾಧಿಯ ವಿನ್ಯಾಸ ಮತ್ತು ಸುತ್ತಮುತ್ತಲಿನ ಪ್ರದೇಶವು ತಾಜ್ ಮಹಲ್‌ನಂತೆಯೇ ಇದ್ದರೂ, ಈ ವಾಸ್ತುಶಿಲ್ಪ ತಾಜ್ ಮಹಲಿನ ಮಾಂತ್ರಿಕತೆಯನ್ನು ಬಿಂಬಿಸುವುದರಲ್ಲಿ ವಿಫಲವಾಗಿದೆ ಎಂದೇ ವಾಸ್ತುಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಇದನ್ನು ತಾಜ್ ಮಹಲಿನ ಕಳಪೆ ಅನುಕರಣೆ ಎಂದು ಪರಿಗಣಿಸಲಾಗಿದೆ. ಮೂಲ ತಾಜ್ ಮಹಲಿನ ವೈಭವ, ವೈಭೋಗ ಇದಕ್ಕಿಲ್ಲದಿದ್ದರೂ, ಈ ಕಟ್ಟಡವೂ ಅದ್ಭುತವಾಗಿದ್ದು, ನೋಡಬೇಕಾದದ್ದೇ.

ತಾಜ್ ಮಹಲಿನಂತೆ ಬೀಬಿ ಕಾ ಮಕ್ಬರಾ ಕೂಡ ಸಮಾಧಿಯೇ. ಔರಂಗಜೇಬನ ರಾಣಿ ಬೇಗಂ ರಬಿಯಾ ದೌರಾನಿಯ ನೆನಪಿಗಾಗಿ ಈ ಕಟ್ಟಡ ಕಟ್ಟಲಾಗಿದೆ. ಔರಂಗಜೇಬನ ಕಾಲದಲ್ಲಿ ಒಂದು ಸರಳ ಸಮಾಧಿಯಾಗಿ ಇದನ್ನು ರಚಿಸಲಾಗಿತ್ತು. ನಂತರ ಔರಂಗಜೇಬನ ಮಗ ರಾಜಕುಮಾರ ಅಜಮ್ ಶಾ 1679ರಲ್ಲಿ ಈ ರೂಪದಲ್ಲಿ ಪೂರ್ಣಗೊಳಿಸಿದ. ಇದನ್ನು ಪೂರ್ಣಗೊಳಿಸಲೂ ಎರಡು ದಶಕಗಳ ಕಾಲ ಸಾವಿರಾರು ಕಾರ್ಮಿಕರು ದುಡಿದಿದ್ದಾರೆ. ಸಮಾಧಿಯ ಗೋಡೆಯ ಮೇಲಿನ ಶಾಸನವು ಈ ಸ್ಮಾರಕವನ್ನು ನಿರ್ಮಿಸಲು ನಿಖರವಾಗಿ 6,65,283 ಮತ್ತು 7 ಆಣೆ ರೂಪಾಯಿ ವೆಚ್ಚವಾಗಿದೆ ಎಂದು ತಿಳಿಸುತ್ತದೆ. ಸ್ಮಾರಕದ ಮುಖ್ಯ ವಾಸ್ತುಶಿಲ್ಪಿ ಉಸ್ತಾದ್ ಅತಾ ಉಲ್ಲಾ ಎಂಬ ಪರ್ಷಿಯನ್.

ಮಕ್ಬರಾವನ್ನು ಸುತ್ತುವರಿದ ಗೋಡೆಗೆ ವಿಶಾಲವಾದ, ಕಲಾತ್ಮಕವಾದ ಬಾಗಿಲುಗಳಿವೆ. ಮುಖ್ಯ ಪ್ರವೇಶದ್ವಾರವು ಷಡ್ಭುಜಾಕೃತಿಯ, ಎರಡು ಅಂತಸ್ತಿನ ರಚನೆಯಾಗಿದ್ದು, ಎರಡೂ ಬದಿಗಳಲ್ಲಿ ಕಮಾನುಗಳನ್ನು ಒಳಗೊಂಡಿದೆ. ಈ ಕಟ್ಟಡದ ಮೇಲೆ ಆರು ಸಣ್ಣ ಮಿನಾರ್‌ಗಳಿವೆ. ಮಧ್ಯದಲ್ಲಿರುವ ಪ್ರವೇಶ ದ್ವಾರ ಎತ್ತರವಾದ ಮರದ ಬಾಗಿಲನ್ನು ಹೊಂದಿದೆ. ಪ್ರವೇಶ ದ್ವಾರದ ಒಳಗೆ ಪರಸ್ಪರ ಎದುರಾಗಿ ಎರಡು ಮೊಗಸಾಲೆಗಳಿವೆ. ಈ ಮೊಗಸಾಲೆಯು ಎಡ ಮತ್ತು ಬಲಕ್ಕೆ ನಿರ್ಮಿಸಲಾದ ವಿಶಾಲ ಕೊಠಡಿಗಳನ್ನು ಹೊಂದಿರುವ ಸಣ್ಣ ಎತ್ತರದ ವೇದಿಕೆಗಳನ್ನು ಒಳಗೊಂಡಿದೆ.

ಒಳಗೆ ಪ್ರವೇಶಿಸುತ್ತಿದ್ದಂತೆಯೇ ಎದುರಿಗೆ ಉದ್ದವಾದ ನೀರಿನ ಕೊಳ ಹಾಗೂ ಕಾರಂಜಿಗಳು ಇವೆ. ಈ ಕೊಳದ ಅಕ್ಕಪಕ್ಕದ ಹಾದಿಗಳು ನಮ್ಮನ್ನು ಮಕ್ಬರಾವರೆಗೆ ಕೊಂಡೊಯ್ಯುತ್ತವೆ. ಕಾಲುಹಾದಿಯ ಪಕ್ಕದ ಮೃದುವಾದ ಹುಲ್ಲುಹಾಸು ಹಾಗೂ ಸಾಲಾಗಿ ನಿಂತ ಅಶೋಕ ವೃಕ್ಷಗಳು ಕಟ್ಟಡಕ್ಕೆ ಸ್ವಾಗತ ಕೋರುತ್ತವೆ. ಕಾಲುಹಾದಿಯಾಗಿ ನಡೆದು ಬಂದರೆ ಕೆಂಪು ಕಲ್ಲಿನ ಎತ್ತರದ ಚೌಕಾಕಾರದ ವೇದಿಕೆ ಮೇಲೆ ನಿಂತಿದೆ ಭವ್ಯವಾದ ಮಕ್ಬರಾ. ಮೇಲ್ಭಾಗದಲ್ಲಿ ಗುಮ್ಮಟಾಕಾರದ ಮಂಟಪಗಳನ್ನು ಹೊಂದಿರುವ ನಾಲ್ಕು ಅಷ್ಟಭುಜಾಕೃತಿಯ ಮಿನಾರ್‌ಗಳು



'ಮಿನಿ ತಾಜ್ ಮಹಲ್'ನ ಪ್ರವೇಶ ದ್ವಾರ



ಮೋಹಕ ಕಲೆಯ ಜಾಲಂಧ್ರವುಳ್ಳ ಕಿಟಕಿ



ರಬಿಯಾ ಉದ್ ದೌರಾನಿಯ ಸಮಾಧಿ

ಚೌಕಾಕಾರದ ವೇದಿಕೆಯ ಮೂಲೆಗಳಲ್ಲಿ ಭವ್ಯವಾಗಿ ನಿಂತಿವೆ. ಮುಖ್ಯ ಕಟ್ಟಡದ ನೆಲಮಾಳಿಗೆಯಲ್ಲಿ ರಾಣಿಯ ಸಮಾಧಿಯಿದ್ದು, ಅದನ್ನು ಮೇಲುಗಡೆಯಿಂದ, ಅಮೃತಶಿಲೆಯ ಬಾಲ್ಕನಿಯಲ್ಲಿ ನಿಂತು ನೋಡಬಹುದು. ಬಿಳಿ ಅಮೃತಶಿಲೆಯ ಅಷ್ಟಭುಜಾಕೃತಿಯ ಜಾಲರಿ ಪರದೆಯು ರಬಿಯಾ ದೌರಾನಿಯ ಸಮಾಧಿಯನ್ನು ಸುತ್ತುವರೆದಿದೆ. ಮಕ್ಬರಾದ ಒಳಗೆ ಹಾಗೂ ಹೊರಗಿನ ಗೋಡೆಗಳಲ್ಲಿ ಆಕರ್ಷಕ ಚಿತ್ತಾರದ ಕೆತ್ತನೆಗಳಿವೆ. ಕಿಟಕಿಗಳಿಗೆ ಅಮೃತ ಶಿಲೆಯಲ್ಲಿ ಮಾಡಿದ ಸುಂದರ ಜಾಲಂಧ್ರಗಳಿವೆ.

ಸಮಾಧಿಯ ಕೆಳಗಿನ ಭಾಗ ಮತ್ತು ಅದರ ಗುಮ್ಮಟವನ್ನು ಬಿಳಿ ಅಮೃತಶಿಲೆಯಿಂದ ಮಾಡಲಾಗಿದ್ದರೆ, ಮಧ್ಯ ಭಾಗವು ಬಸಾಲ್ಟಿಕ್ ಶಿಲೆಯಾಗಿದೆ. ಸೂಕ್ಷ್ಮವಾದ ಸುಣ್ಣದ ಪದರದಿಂದ ಪ್ಲಾಸ್ಟರ್ ಮಾಡಲಾಗಿದೆ. ಸಮಾಧಿಯ ಒಳಭಾಗವನ್ನು ಸುಂದರ ಕೆತ್ತನೆಗಳಿಂದ ಅಲಂಕರಿಸಲಾಗಿದೆ. ಎಲ್ಲಾ ದಿಕ್ಕುಗಳಲ್ಲಿಯೂ ಅಮೃತಶಿಲೆಯ ಕಿಟಕಿಗಳಿವೆ. ಎತ್ತರದ ಜಗಲಿಯ ಮೇಲೆಯೇ ಮಕ್ಬರಾದ ಬಲಬದಿಯಲ್ಲಿ, ಹೈದರಾಬಾದ್ ನಿಜಾಮನು ನಂತರದ ದಿನಗಳಲ್ಲಿ ನಿರ್ಮಿಸಿದ ಒಂದು ಮಸೀದಿಯಿದೆ. ಮಕ್ಬರಾದ ಸುತ್ತ ತೋಟಗಳಿವೆ. ಔರಂಗಜೇಬ್ ಹಾಗೂ ಆತನ ಪತ್ನಿ ಬಳಸುತ್ತಿದ್ದ ಪಾತ್ರೆಗಳು, ಪೀಠೋಪಕರಣಗಳು, ಮುಂತಾಗಿ ಹಲವು ವಸ್ತುಗಳನ್ನು ಸಂಗ್ರಹಿಸಿರುವ ವಸ್ತುಸಂಗ್ರಹಾಲಯ ಸನಿಹದಲ್ಲಿಯೇ ಇದೆ.

ತಾಜ್ ಮಹಲನ್ನು ನೋಡಿದಾಗ ಉಂಟಾಗುವ ಧನ್ಯತೆಯ ಅನುಭವ ಇಲ್ಲಿ ಆಗದಿದ್ದರೂ, ಆಗ್ರಾಕ್ಕೆ ಹೋಗಲಾಗದವರು ಇಲ್ಲೇ ಹತ್ತಿರವಿರುವ ಬೀಬಿ ಕಾ ಮಕ್ಬರಾ ನೋಡಿದರೆ ಆಗ್ರಾದ ತಾಜ್ ಮಹಲ್‌ನ ವೈಭವದ ಅರಿವಾದೀತು. ಒಮ್ಮೆ ನೋಡಲೇಬೇಕಾದ ವಿಶಿಷ್ಟ ವಾಸ್ತುಶಿಲ್ಪ ಇದರದ್ದು. ■

